ಅನುಭವ ಕಥನ

# ಸಯಾಮಿ ದಾಂಪತ್ಯ



**ಕರೀಗೌಡ**

ಕಲೆ: ಸಂತೋಷ್ ಸಸಿಹಿತ್ಲು

ಮದುವೆಯಾದಾಗ, ನನ್ನವ್ವ ಮನೆಗೆ ಸೊಸೆಯೋ ಅಥವಾ ಇನ್ನೊಂದು ಹೆಣ್ಣಾಳಾಗಿ ಬಂದಳೋ? ಎನ್ನುವುದರ ಬಗ್ಗೆ ಇನ್ನೂ ಜಿಜ್ಞಾಸೆ ಇದೆ. ಏಕೆಂದರೆ, ಅದು ಬಾಲ್ಯ ವಿವಾಹ ಮತ್ತು ನನ್ನವ್ವ ತುಂಬಿದ ಮನೆಗೆ ಮೊದಲ ಸೊಸೆ.

ಉಳಿದ ಏಳು ಜನಗಳಿಗೆ ಅಡುಗೆ ಮಾಡುವುದು, ಕೊಟ್ಟಿಗೆ ಸ್ವಚ್ಛಗೊಳಿಸುವುದು ಮುಂತಾದ ಕೆಲಸಗಳ ಜವಾಬ್ದಾರಿಯನ್ನು ಹೊತ್ತುಕೊಂಡು ಮೂರು ತಿಂಗಳಿಗೆ ಆಕೆ ಕೃಷಿ ಕೆಲಸಗಳಿಗೂ ತೊಡಗಿಸಿಕೊಳ್ಳಬೇಕಾಯ್ತು. ಹಾಗಾಗಿ ಅಂತ ಕಾಣುತ್ತೆ, ಅವಳಿಗೆ ಮನೆಗಿಂತ ಹೊಲ, ಎಮ್ಮೆ ಮತ್ತು ದನಕರುಗಳೇ ಜೀವನದಲ್ಲಿ ಹೆಚ್ಚು ಆಪ್ತವಾಗಿದ್ದು.

ನನ್ನ ಅಪ್ಪ ಸಿದ್ದೇಗೌಡ. ನನ್ನ ತಾತನಿಗೆ ಆರು ಜನ ಮಕ್ಕಳು. ಮೂರು ಗಂಡು ಮತ್ತು ಮೂರು ಹೆಣ್ಣು. ನನ್ನ ಅಪ್ಪನೇ ಹಿರಿಮಗ. ನನ್ನ ಅಜ್ಜಿ ತುಂಬಾ ಚಿಕ್ಕ ವಯಸ್ಸಿನಲ್ಲೇ ತೀರಿಹೋದರು. ನಮ್ಮ ಪಿತ್ರಾರ್ಜಿತ ಹೊಲ ಮತ್ತು ನನ್ನವ್ವನ ತವರಿನ ಹೊಲ ಅಕ್ಕಪಕ್ಕದಲ್ಲಿವೆ. ನನ್ನ ಅಜ್ಜಿ, ನನ್ನ ಅವ್ವನನ್ನು ಕುರಿತು ಅಕ್ಕಪಕ್ಕದವರೊಡನೆ 'ಇವಳು ತನ್ನ ಸೊಸೆಯಾಗುತ್ತಾಳೆ' ಎಂದು ಪಕ್ಕದ ಹೊಲದಲ್ಲಿ ದುಡಿಯುತ್ತಿದ್ದಾಗಲೇ ನೋಡಿ ನಿರ್ಧರಿಸಿದ್ದಳು. ಅಜ್ಜಿ ಸತ್ತಾಗ ತಾತ, ತಾನು ಮರು ಮದುವೆಯಾಗದೇ ಹಿರಿ ಮಗನಾದ ನನ್ನ ಅಪ್ಪನ ಮದುವೆಗೆ ಯೋಚಿಸಿದ. ಪಕ್ಕದ ಜಮೀನಿನಲ್ಲೇ ನೋಡಿದ್ದ ನೆರೆಯ ಗ್ರಾಮ ದೊಡ್ಡಿಯ ನನ್ನ ಅವ್ವನೊಡನೆ ಅಪ್ಪನ ಮದುವೆಯಾಯಿತು. ಅದು ಇಬ್ಬರಿಗೂ ಬಾಲ್ಯ ವಿವಾಹವಾಗಿತ್ತು.

ಕುಟುಂಬದ ಪರಿಧಿಯೊಳಗೆ ಬೆಳೆದ ಅವ್ವನಿಗೆ ಅಪ್ಪನ ಮನೆ ಪರಕೀಯವೆನಿಸಿತು. ಹೊಸ ಮನೆಗೆ ಸೊಸೆಯಾಗಿ ಬಂದ ಅವ್ವ, ಗಂಡನ ಮನೆಗೆ ಒಂದು ಹೆಚ್ಚಿನ ಹೆಣ್ಣಾಳಿನಂತೆ ಸೇರ್ಪಡೆಗೊಂಡಳು. ಆ ಮನೆಯಲ್ಲಿ ತಾತ ಮತ್ತು ಆರು ಮಕ್ಕಳ ಕುಟುಂಬಕ್ಕೆ ಅವ್ವ ಎಂಟನೆಯ ಸೇರ್ಪಡೆ. ಇದ್ದಿದ್ದು ಐದು ಅಂಕಣದ ಮಾಳಿಗೆ ಮನೆ. ಪ್ರತ್ಯೇಕ ಕೊಠಡಿಗಳಿರಲಿಲ್ಲ. ಮಾಳಿಗೆ ಮನೆಯ ಒಂದು ಮೂಲೆಯಲ್ಲಿ ಬಚ್ಚಲುಮನೆ. ಶೌಚಾಲಯ ಆ ಕಾಲಕ್ಕೆ ಕನಸಿನ ಮಾತಾಗಿತ್ತು. ಮನೆಯ ಒಂದು ಮೂಲೆಯಲ್ಲಿ ಒಂದು ಜೊತೆ ದನ, ಮೂರ್ನಾಲ್ಕು ಎಮ್ಮೆ, ಒಂದೆರಡು ಮೇಕೆಗಳಿಗೂ ವಾಸ್ತವ್ಯ. ಮನುಷ್ಯ ಮತ್ತು ಪ್ರಾಣಿಗಳಿಂದ ತುಂಬಿದ ಮನೆಯಲ್ಲಿ ಏಕಾಂತಕ್ಕೆ ಆಸ್ಪದವಿರಲಿಲ್ಲ. ಸರಸ–ಸಲ್ಲಾಪವನ್ನು ಕಲ್ಪಿಸಿಕೊಳ್ಳುವಂತಿರಲಿಲ್ಲ.

ಸೊಸೆಯಾಗಿ ಬಂದ ಅವ್ವ, ಮನೆ ಮತ್ತು ಹೊಲದಲ್ಲಿ ಬಾಲ ಕಾರ್ಮಿಕಳಾಗಿ ದುಡಿಯಲಾರಂಭಿಸಿದಳು. ಮನೆಯಲ್ಲಿ ಏಳು ಜನಕ್ಕೂ ರಾಗಿ ಮುದ್ದೆ